# ಸಹೋದರರ 'ತಲೆ'ಚಳಕ!

ವಿರಾಮವಾಗಿ ನಡೆದುಕೊಂಡು ಹೋದರೂ 90 ಮೆಟ್ಟಿಲುಗಳನ್ನು ಒಂದೇ ಏಟಿಗೆ ವಿಶ್ರಾಂತಿ ತೆಗೆದುಕೊಳ್ಳದೇ ಏರುವುದು ಬಲು ಕಷ್ಟ. ಅಂತಹುದರಲ್ಲಿ ವಿಯೆಟ್ನಾಮಿನ ಈ ಕೋಕ್ ಸಹೋದರರು ಈ ರೀತಿ ಒಬ್ಬರ ಮೇಲೊಬ್ಬರು ತಲೆಯ ಮೇಲೆ ಸಮತೋಲನ ಸಾಧಿಸುತ್ತ 52 ಸೆಕೆಂಡುಗಳಲ್ಲೇ ಇಷ್ಟೊಂದು ಸಂಖ್ಯೆಯ ಮೆಟ್ಟಿಲುಗಳನ್ನು ಹತ್ತಿ ಹೋದರೆಂದರೆ.. ಗಿನ್ನೆಸ್ ದಾಖಲೆಗೆ ಸೇರುವಂತಹ ಸಾಧನೆಯೇ ಸರಿ.

ಕೋಕ್ ಕೋ ಜಿಯಾಂಗ್ ತನ್ನ ತಲೆಯ ಮೇಲೆ ಸಹೋದರ ಕೋಕ್ ನೈಪ್ ಜಿಯಾಂಗ್‌ನನ್ನು ತಲೆ ಕೆಳಗಾಗಿ ಹೊತ್ತು ಸಮತೋಲನ ಮಾಡುತ್ತ ಸ್ಪೇನಿನ ಜಿರೋನಾ ಕ್ಯಾಥೆಡ್ರಲ್‌ನ 90 ಮೆಟ್ಟಿಲುಗಳನ್ನು ಹತ್ತಿ ಈ ವಿಕ್ರಮ ಸಾಧಿಸಿದ್ದಾನೆ. ಇದಕ್ಕಾಗಿ ತೆಗೆದುಕೊಂಡ ಸಮಯ ಕೇವಲ 52 ಸೆಕೆಂಡುಗಳು. ಈ ಹಿಂದೆ ಚೀನಾದ ತಾಂಗ್ ತಾವೊ ಹಾಗೂ ಸು ಝೊಂಗ್‌ಕ್ಸಿಯಾನ್ ಈ ರೀತಿ ಸರ್ಕಸ್ ಮಾಡುತ್ತ ಒಂದು ನಿಮಿಷದಲ್ಲಿ 26 ಮೆಟ್ಟಿಲುಗಳನ್ನು ಏರಿ ಮಾಡಿದ ಗಿನ್ನೆಸ್ ದಾಖಲೆಯನ್ನು ಸರ್ಕಸ್ ಕಲಾವಿದರಾದ ವಿಯೆಟ್ನಾಮಿನ ಈ ಸಹೋದರರು ಮುರಿದು ಹಾಕಿದ್ದಾರೆ.

ಈ ಹಿಂದೆಯೂ ತಲೆ ಹಾಗೂ ಕೈಗಳನ್ನು ಬಳಸಿ ಮಾಡುವ ಹಲವು ಸಾಹಸಗಳನ್ನು ಈ ಸಹೋದರರು ಪ್ರದರ್ಶಿಸಿ ಶಹಭಾಸ್ ಎನಿಸಿಕೊಂಡಿದ್ದಾರಂತೆ. ಆದರೆ ಅಮೆರಿಕ ಟಿವಿಯ ಪ್ರಸಿದ್ಧ ಷೋ 'ಗೇಮ್ ಆಫ್ ಥ್ರೋನ್ಸ್' ಚಿತ್ರೀಕರಣ ನಡೆದ ಈ ಜಾಗದಲ್ಲಿ ಇಂತಹ ಅದ್ಭುತ ಸಾಧನೆ ಮಾಡಿದ್ದು ಜಿಯಾಂಗ್ ಸಹೋದರರಿಗೆ ಹೆಚ್ಚು ಸಂತಸ ನೀಡಿದೆಯಂತೆ.

■ ಎಸ್.ಹೆಗಡೆ



